ಕರ್ನಾಟಕ ವಿಧಾನ ಪರಿಷತ್ತು

ಕರ್ನಾಟಕ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಡಾ. ತಳವಾರ ಸಾಬಣ್ಣಾ ಇವರು ನಿಯಮ-72ರ ಮೇರೆಗೆ ನೀಡಿರುವ ಸೂಚನಾ ಪತ್ರಕ್ಕೆ ಸರ್ಕಾರದ ಹೇಳಿಕೆ.

ವಿಷಯ : -

ಕರ್ನಾಟಕ ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಅಧ್ಯಯನ ಪೀಠಗಳ ಸದ್ಯದ ಶೈಕ್ಷಣಿಕ ಸ್ಥಿತಿ, ಕಾರ್ಯವೈಖರಿ, ಹಣಕಾಸಿನ ವ್ಯವಸ್ಥೆ, ಸಮಾಜಕ್ಕೆ ಮತ್ತು ಶೈಕ್ಷಣಿಕ ಕ್ಷೇತ್ರಕ್ಕೆ ನೀಡಿದ ಕೊಡುಗೆ ಹಾಗೂ ಎದುರಿಸುತ್ತಿರುವ ಸಮಸ್ಯೆಗಳು.

ಸರ್ಕಾರದ ಉತ್ತರ : -

ವಿಶ್ವವಿದ್ಯಾಲಯಗಳ ಪ್ರಾದೇಶಿಕ ಅಧಿಕಾರ ವ್ಯಾಪ್ತಿ, ಆರ್ಥಿಕ ಸಾಮರ್ಥ್ಯ, ಸಂಶೋಧನಾ/ಮಾನವ ಸಂಪನ್ಮೂಲಗಳಂತಹ ಪ್ರಮಾಣಕಗಳ ಆಧಾರದ ಮೇಲೆ ಉನ್ನತ ಶಿಕ್ಷಣ ಇಲಾಖೆಯಡಿಯ ವಿಶ್ವವಿದ್ಯಾಲಯಗಳಲ್ಲಿ ಸಾಹಿತಿಗಳು, ಚಿಂತಕರು, ಸಾಮಾಜಿಕ ಸುಧಾರಕರು, ಕ್ರಾಂತ್ರಿಕಾರರು, ಐತಿಹಾಸಿಕ ವ್ಯಕ್ತಿಗಳು, ಅನುಭವಿಗಳು ಮತ್ತು ಶರಣ / ಸಂತರ ಹೆಸರುಗಳಲ್ಲಿ ಅಧ್ಯಯನ ಪೀಠಗಳನ್ನು ಸ್ಥಾಪಿಸಲಾಗಿರುತ್ತದೆ. ಸದರಿ ಅಧ್ಯಯನ ಪೀಠಗಳ ವತಿಯಿಂದ ಅಧ್ಯಾಪಕರು, ವಿದ್ಯಾರ್ಥಿಗಳು ಮತ್ತು ಸಂಶೋಧಕರಿಗೆ ವಿಚಾರ ಸಂಕಿರಣ, ವಿಶೇಷ ಉಪನ್ಯಾಸ, ಕಾರ್ಯಗಾರ, ಕಮ್ಮಟಗಳು ಇತ್ಯಾದಿ ಶೈಕ್ಷಣಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ.

ಪೂರ್ವಸಿದ್ಧತೆ, ದೂರದೃಷ್ಟಿ ಹಾಗೂ ಸಮಗ್ರ ಕ್ರಿಯಾಯೋಜನೆಯೊಂದಿಗೆ ಸ್ಥಾಪಿಸಲಾದ ಅಧ್ಯಯನ , ಪೀಠಗಳಿಗೆ ಸರ್ಕಾರದಿಂದ ಆರ್ಥಿಕಾನುದಾನ ಒದಗಿಸಲಾಗುತ್ತಿದ್ದು, ಸದರಿ ಅನುದಾನದಿಂದ ಬರುವ ಬಡ್ಡಿ ಮೊತ್ತದಲ್ಲಿ ಶೈಕ್ಷಣಿಕ ಹಾಗೂ ಸಂಶೋದನೆಗೆ ಪೂರಕವಾದ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ. ಈ ರೀತಿ ಸ್ಥಾಪಿಸಲಾಗಿರುವ ಅಧ್ಯಯನ ಪೀಠಗಳಲ್ಲಿ ಮಹನೀಯರುಗಳ ಜೀವನ, ಅವರ ಬರಹ, ಸಾಮಾಜಿಕ ಸೇವೆ, ಅವರ ಕೊಡುಗೆಗಳು ಹಾಗೂ ಬದುಕಿನ ಹೋರಾಟಗಳ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗುತ್ತಿದೆ.

ಮುಂದುವರೆದು, ಪ್ರಸ್ತಾಪಿತ ಪೀಠಗಳ ವೆಚ್ಚ ನಿರ್ವಹಣೆಗಾಗಿ ಒಂದು ಬಾರಿಯ ಕ್ರಮವಾಗಿ ಮೂಲಧನ ರೂಪದಲ್ಲಿ ಸರ್ಕಾರದಿಂದ ಒದಗಿಸಲಾಗುವ ಅನುದಾನವನ್ನು ನಿಶ್ಚಿತ ಠೇವಣಿಯಲ್ಲಿರಿಸಿ, ಅದರಿಂದ ಬರುವ ಬಡ್ಡಿ ಮೊತ್ತದಲ್ಲಿ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

ಇಡಿ/ 4 /ಯುಟಿಟಿ/2024

(ಡಾ|| ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಇಲಾಖೆ,